ಒರಟೊರಟಾಗಿ ಕೈಬೀಸ್ಕೊಂಡು ಹೋಗೋ ಜಾಯಮಾನದೋನೇ ಅಲ್ಲ. ಬಿಡು ಬೀಸಾಗಿ ನಡೆಯುವುದಾಗಲಿ, ಕೆಮ್ಮಿ ಕ್ಯಾಕರಿಸೋ ಇತ್ಯಾದಿ ಸ್ವರಗಳನ್ನು ಹೊರಡಿಸುವುದಾಗಲೀ, ಪಕ್ಕದಿಂದಲೋ ಎದುರಿನಿಂದಲೋ ಜಾಗಿಂಗ್ ಮಾಡುತ್ತಾ ಓಡಿಬರೋರು ಅಕಸ್ಮಾತ್ ಗುಮ್ಮಿದಾಗ, ಇವನು ಮುಖ ಗಂಟಿಕ್ಕಿ, ಸಿಡುಕೋದೋ ಬಯ್ಗಳನ್ನು ಉದುರಿಸೋ ಗಡಸಿನ ಪಾರ್ಟಿಯೇ ಅಲ್ಲ. ಶುದ್ಧ ಮಖೇಡಿ ಈತ ಎಂದು ಕಮ್ಲೂಗೆ ಗಂಡನ ಬಗ್ಗೆ ಸಿಕ್ಕಾಪಟ್ಟೆ ರೇಗುತ್ತಿತ್ತು.

'ಎಂಥಾ ಪ್ರಾಣೀರೀ ನೀವು, ಕೊಂಚನಾದ್ರೂ ಪ್ರತಿಕ್ರಿಯೆ, ಪ್ರತಿಭಟನೆ ತೋರಿಸಬಾರದೇ? ಕೆಲಸಕ್ಕೆ ಬಾರದ ನಾಮರ್ದ ಸಹನೆ ನಿಮ್ದು... ಆಚೀಚೆ ಜೊತೆಯಲ್ಲಿ ನಡೆಯೋರನ್ನು ಸ್ವಲ್ಪವಾದರೂ ಗಮನಿಸಬಾರದೇ, ಕಣ್ಣೆತ್ತಿ ನೋಡಬಾರ್ದೆ, ಅಟ್ಲೀಸ್ಟ್ ಕುತೂಹಲಕ್ಕೆ... ಗೌತಮ ಬುದ್ಧ ನೀವು... ಅದೆಲ್ಲಿ ಧ್ಯಾನವೋ, ಸುತ್ತಮುತ್ತಲಿನ ಪರಿವೆಯೇ ಇಲ್ಲ. ಮನುಷ್ಯ ಸಹಜ ನಡವಳಿಕೆಗಳೇ ನಿಮ್ಮಲ್ಲಿ ಇಲ್ಲವಲ್ರೀ... ಬಡ್ಕೋಬೇಕು. ಚೂರೂ ಸ್ಮಾರ್ಟ್‌ನೆಸ್ ಅಂಬೋದೇ ಇಲ್ವಲ್ಲ... ಮಹಾ ಸಂಕೋಚದಮೂಟೆ. ನನ್ನ ಕರ್ಮ... ನಿಮ್ಮಂಥ ಮೂಕಪ್ರಾಣಿಯ ಜೊತೆ ಎಂಥ ಚಾರ್ಮೂ ಇರಲ್ಲ...' ಎಂದು ಕಮ್ಲೂ ಗಂಡನನ್ನು ಸದಾ ಕೆಣಕುತ್ತ, ಕುಟುಕುತ್ತ ತನ್ನ ಅಸಮಾಧಾನ ಕಕ್ಕುವುದುಂಟು.

ಬ್ರಹ್ಮದೇವ ಏರುದನಿಯಲ್ಲಿ ಕೇಳಿದ:

'ಹೋಗಲಿ, ಜೀವನದಲ್ಲಿ ವಿಪರೀತ ಆಸಕ್ತಿ–ಕುತೂಹಲ, ಚಟುವಟಿಕೆ ಇರೋ ಅಂಥ, ಎಲ್ಲರ ಜೊತೆ ಗಂಟೆಗಟ್ಲೆ ಹರಟೆ, ಜಗಳ, ಗುದ್ದಾಟ ಮಾಡೋ ಎನರ್ಜೆಟಿಕ್ ಹುಲಿಯಂಥ ಧೀರನನ್ನ, ಎಲ್ಲರ ವಿಷಯಕ್ಕೂ ಮೂಗು ತೂರಿಸಿ ತನ್ನ ಇರುವನ್ನು ಎಲ್ರೂ ಗಮನಿಸೋ ಹಾಗೇ, ಗುರುತಿಸೋವಂಥ ಮೇಲೆಬಿದ್ದು ಹೋಗೊಂಥ ಓವರ್ ಸ್ಮಾರ್ಟ್ ಅಂಥ ಗಂಡನ್ನ ದಯಪಾಲಿಸ್ಲೀನಿ, ಸಂತೋಷಾನಾ?'

ತಾನು ಬಾಯಿ ಬಿಡುವುದನ್ನೇ ಕಾದಿರೋ ಹಾಗಿದ್ದ ಬ್ರಹ್ಮನ ಅತ್ಯುತ್ಸಾಹ ಕಂಡು ಕಮ್ಲೂ ಗಾಬರಿಯಾದಳು.

ಥಟ್ಟನೆ 'ನೋ...' ಎಂದು ಚೀರಿದಳು.

ಅವಳ ಕಣ್ಮುಂದೆ ತಂಗಿಯ ಗಂಡ ನರಸಿಂಹ ಎದುರಿಗೆ ಬಂದು ನಿಂತಂತಾಗಿ ನಡುಗಿಹೋದಳು. ತಮ್ಮ ಇಡೀ ಕುಟುಂಬದವರೆಲ್ಲ ಅವನ ಜೋರು ಜಬರ್ದಸ್ತಿಗೆ, ಎಲ್ಲರ ವಿಷಯಕ್ಕೂ ಅನಗತ್ಯ ಪ್ರವೇಶಿಸಿ, ಜಗಳವಾಡುತ್ತಿದ್ದ ಅವನ ಅತೀ ತರಲೆ ಸ್ವಭಾವ, ರೌದ್ರ ಗುಣ ಕಂಡು ಅವನನ್ನು ಮಾತಾಡಿಸಲಿಕ್ಕೇ ಹಿಂಜರಿಯುತ್ತಿದ್ದರು. ಎಲ್ಲಿ ಹೋದರೂ ಮರ್ಯಾದೆ ಹೋಗತ್ತೆ ಎಂದು ದುಷ್ಟಸ್ವಭಾವದ ತನ್ನ ಗಂಡನ ವಕ್ರನಡತೆಗೆ ಬೆದರಿ, ಸದಾ ಮನೆಯಲ್ಲೇ ಹುಳಿತುಹೋಗುತ್ತಿದ್ದ ತನ್ನ ತಂಗಿಯ ಪಾಡು ಕಮ್ಲೂಗೆ ಗೊತ್ತಿಲ್ದೇ ಏನಿಲ್ಲ.

ಅವಾಕ್ಕಾಗಿ ನಿಂತ ಕಮ್ಲೂವನ್ನು ಕಂಡಿದ್ದೇ ಬ್ರಹ್ಮಾ–

'ಮತ್ತಿನೆಂಥಾ ಗಂಡ ಬೇಕು ನಿಂಗೆ ಹೇಳಮ್ಮ...



ನಂಗೆ ಟೈಮಾಯ್ತು... ಇನ್ನೂ ಅನೇಕ ಜನ ನನಗೋಸ್ಕರ ಕಾದಿದ್ದಾರೆ' ಎಂದು ಅಸಹನೆಯಿಂದ ಹೆಜ್ಜೆ ಬದಲಿಸಿದ.

'ಬೇಗ ನಿರ್ಧರಿಸಿ ಹೇಳಮ್ಮ, ನಿನಗೆ ಯಾವ ಟೈಪ್ ಗಂಡ ಬೇಕೂಂತ'.

ಕಮ್ಲೂಗೆ ಕನ್‌ಫ್ಯೂಸ್ ಆಯ್ತು. ಒಂದೇ ಸಮನೆ ಬ್ರಹ್ಮನ ಅವಸರದ ವರಾತ!

'ಬೇಗ ಚೂಸ್ ಮಾಡ್ಕೊಂಡು ಹೇಳು, ಅರ್ಜೆಂಟ್' ಎನ್ನೋ ಧಾಟಿ.

ಅವಳಿಗೆ ಗಂಡನ ಬಗ್ಗೆ ರಾಶಿ ದೂರಿದ್ದದ್ದು ನಿಜ. ಎಂಥ ಚೆಲುವೆಯಾದ ಹೆಂಡ್ತಿ ಪಕ್ಕದಲ್ಲಿದ್ರೂ, ಈಗಿನ ಮಾತಲ್ಲ, ಮದುವೆಯಾದ ಹೊಸತರಲ್ಲೂ ಶ್ರೀಕಂಠುಗೆ ಮಹಾ ನಾಚಿಕೆ, ಸಂಕೋಚ. ದೊಡ್ಡವರ ಸಮ್ಮುಖದಲ್ಲಿರಲಿ ಏಕಾಂತದಲ್ಲೂ ಅದೇನೋ ಅಪರಿಚಿತತೆ. ಅದೇನು ನಾಚಿಕೆಯೋ, ಹೆದರಿಕೆಯೋ, ಗಾಂಭೀರ್ಯವೋ... ಒಂದು ದಿನವೂ ಅವಳನ್ನು ರೊಮ್ಯಾಂಟಿಕ್ ಆಗಿ ಅಪ್ಪಿದವನಲ್ಲ, ಬಾಯಿಬಿಟ್ಟು ಹೊಗಳಿದವನಲ್ಲ... ಸಿನಿಮಾಗಳಲ್ಲಿ ಅವಳು ಕಂಡು ತುಂಬಾ ಕ್ರಷ್ ಆಗಿದ್ದ ಹೀರೋಗಳಂತೆ, ತನ್ನ ಗಂಡ ಎಂದೂ ತುಂಟತನ ತೋರಿದವನಲ್ಲ. ಮಹಾ ವಿರಾಗಿಯಂತೆ, ಅಳತೆ ಮಾಡಿದಷ್ಟು ನಡೆ–ನುಡಿಯ ಸನ್ಯಾಸಿಯಂತೆ ಭಾಸವಾದ ಶ್ರೀಕಂಠುವನ್ನು ಕಂಡು ಅವಳು ಹಣೆ ಹಣೆ ಚಚ್ಚಿಕೊಂಡದ್ದುಂಟು. ನಿರಾಸೆಯಿಂದ ಕಣ್ಣು ತುಂಬಿಕೊಂಡದ್ದುಂಟು. ಒಟ್ಟಿನಲ್ಲಿ ಮಹಾ ಕನಸುಗಾರ್ತಿ ಸರಸಿಯಾದ ಕಮ್ಲೂಗೆ ಜಸ್ಟ್ ಆಪೋಸಿಟ್ ಸ್ವಭಾವ ಈ ಶ್ರೀಕಂಠುದು... ಅಂದಿನಿಂದ ಇಂದಿನವರೆಗೂ ರಸಿಕತನದ ಅಡ್ರೆಸ್ಸೇ ತಿಳಿಯದ, ಹಿಂದೆ ಬಂದರೆ ಹಾಯದ ಮುಂದೆ ಬಂದರೆ ಗುಮ್ಮದ ಅಮಾಯಕ ನಿರುಪದ್ರವಿಯಂತೆ ಸಭ್ಯಸ್ಥನಾಗಿ ಬಾಳುವೆ ಮಾಡುತ್ತಿದ್ದ ಅವನನ್ನು ಕಂಡರೆ ಕಮ್ಲೂಗೆ ತೆಗೆದು ಎರಡು ಬಿಗಿದುಬಿಡಲೇ ಎಂಬಷ್ಟು ಕೋಪ.

'ಯೋಚಿಸಬೇಡ ಕಮಲಮ್ಮ... ನಿನ್ನಾಸೆಯಂತೆ ನಿನ್ನ ಕನಸಿನ ಮಹಾರಸಿಕ ಮಹಾಶಯ ಗಂಡನನ್ನೇ ಸೃಷ್ಟಿಸಿ ಕೊಡುತ್ತೇನೆ. ಆಗಬಹುದೇ?'

ಬ್ರಹ್ಮನ ನುಡಿ ಕೂಡಲೇ ಎಲ್ಲಿ ಜಾರಿಯಾಗಿ ಇನ್ನೇನು ಹೊಸ ಸನ್ನಿವೇಶ ಎದುರಾಗುವುದೋ ಎಂಬ ಆತಂಕದಲ್ಲವಳು – 'ನಿಲ್ಲಿ... ನಿಲ್ಲಿ... ಸ್ವಲ್ಪ ತಡೆಯಿರಿ...' ಎಂದು ಕೈ ಮೇಲೆತ್ತಿ ಕೋರಿಕೊಂಡಳು.

ವರ್ಷ ವರ್ಷ ಹೊಟ್ಟೆ ಉಬ್ಬಿಸಿಕೊಂಡು ಉಬ್ಬಸಪಟ್ಟುಕೊಂಡು ಹೈರಾಣಾಗಿದ್ದ ಬಾಲ್ಯದ ಗೆಳತಿ ವಿಜಯಾ ಹೇಳುತ್ತಿದ್ದ ಒಂದೊಂದು ಕ್ರೌರ್ಯದ ಕಥೆಯನ್ನೂ ಕೇಳಿ ಕಮ್ಲೂ ಕನಲಿದ್ದಳು.

'ಅಲ್ವೇ, ನಿನ್ನ ಗಂಡ ಮನುಷ್ಯನೋ ಮೃಗಾನೋ, ನಿನ್ನ ಯೋಗಕ್ಷೇಮಾನೂ ನೋಡದೆ ಹೀಗೆ ನಿನ್ನ ಹಿಂಸಿಸುತ್ತಾನಲ್ಲ... ಥೂ ಅಸಹ್ಯ. ಮೈಯೆಲ್ಲ ಹೇಗೆ ಪರಚಿದ್ದಾನೆ ನೋಡು, ಓಹ್... ತುಟಿಯೆಲ್ಲ ಹೇಗೆ ಊದಿದೆ ನೋಡು... ಅವನಿಗೆ ಹೇಳೋರು ಕೇಳೋರು ಯಾರೂ ಇಲ್ವೇ... ಹೆಂಡತಿಯನ್ನ ಒಂದು ಕಾಮದಯಂತ್ರ ಅಂದ್ಕೊಂಡಿದ್ದಾನೋ ಹೇಗೆ ರ್‍ಯಾಸ್ಕಲ್... ಒತ್ತಾಯವಾಗಿ ಹೆಂಡತಿಯನ್ನಾದರೂ ಹೀಗೆ ಮಾಡೋದು ಅತ್ಯಾಚಾರ ಅಂತ ಕೋರ್ಟ್ ಹೇಳಿದೆ. ನೀನವನಿಗೆ ಹೇಳ್ತೀಯೋ ಅಥ್ವಾ ನಾನೇ ಹೇಳಲೋ? ಇನ್ನೊಂದ್ಸಲ ಅವನು ನಿನ್ನ ಹತ್ತಿರ ಬಂದು ಗೋಳು ಹೊಯ್ದುಕೊಂಡ್ರೆ ನಾನೇ ಪೊಲೀಸ್ ಕಂಪ್ಲೇಂಟ್ ಕೊಡ್ತೀನಿ ನೋಡು... ಸಾಲದ್ದಕ್ಕೆ ಬೇರೆಯವರ ಹತ್ರ ಹೋಗೋ ಕೆಟ್ಟ ಚಾಳಿ ಬೇರೆ...'

ಒಂದುಕ್ಷಣ ವಿಜಯಳ ಕೆಟ್ಟ–ಕ್ರೂರಿ–ಕಾಮುಕ ಗಂಡನನ್ನು ನೆನೆಸಿಕೊಂಡು ಕಮ್ಲೂ ಕಣ್ಮುಚ್ಚಿ ಭಾವುಕಳಾಗಿ ನಿಂತುಬಿಟ್ಟಳು. ಅವಳೆದೆ ಢವಢವಿಸುತ್ತಿತ್ತು.

'ದುಡಿದ್ದನ್ನೆಲ್ಲ ಕುಡಿತ, ಸಿಗರೇಟು ಕೆಟ್ಟಚಟಕ್ಕೆ ಸುರಿದು, ಹೆಂಡ್ತೀ ಮಕ್ಕಳನ್ನು ಉಪವಾಸ ಕೆಡವೋ ಬೇಜವಾಬ್ದಾರಿಯ ಕೆಟ್ಟಮನುಷ್ಯ, ಮಕ್ಕಳಿಗೆ ಸರಿಯಾಗಿ ಒಂದು ದಾರಿಯೂ ಮಾಡಿಲ್ಲ... ಸಾಲದ್ದಕ್ಕೆ ಹೊಡೆತ–ಬಡಿತ ಬೇರೆ. ಪ್ರಾಣ ಕಳ್ಕೊಳೋಷ್ಟು ಬ್ಯಾಸರಾಗಿಹೋಗಿದೆ ಅಮ್ಮಾ' – ಕೆಲಸದಾಕೆಯ ಪರಿಚಿತ ಸ್ವರ ಕಿವಿಯಲ್ಲಿ ರಿಂಗಣಗುಣಿದು ನಡುಗಿ ಹೋದಳವಳು.

'ಏನ್ರೀ... ಸದಾ ಮನೆಯಲ್ಲೇ ಗೂಟ ಬಡಿದುಕೊಂಡು ಕೂತಿರ್ತೀರಲ್ಲ... ನಿಮಗ್ಯಾರು ಫ್ರೆಂಡ್ಸೇ ಇಲ್ವೇ... ಗಂಡಸೂ ಅಂದಮೇಲೆ ಒಂದ್ಸೊಲ್ಪ ಹೊರಗೆ ಸುತ್ತಾಟ–ಹವ್ಯಾಸ ಇತ್ಯಾದಿಗಳು ಇದ್ರೆ ಗಮ್ಮತ್ತು...'

ತನ್ನದೇ ಮಾತುಗಳನ್ನು ನೆನೆದು ಕಮ್ಲೂ 'ಥೂ' ಎಂದು ತನ್ನ ಕೆನ್ನೆ ಕೆನ್ನೆ ಬಡಿದುಕೊಂಡು, ಪಶ್ಚಾತ್ತಾಪದಿಂದ ಗದ್ಗದಿಸಿ, 'ಛೆ ಪಾಪ... ದಿವಿನಾಗಿ ದುಡಿದದ್ದನ್ನೆಲ್ಲ ಜೋಪಾನ ಮಾಡಿ, ಸ್ವಂತ ಮನೆಯಲ್ಲಿ ನೆಮ್ಮದಿಯಿಂದ ಹೆಂಡ್ತೀ ಮಕ್ಕಳನ್ನು ನೋಡ್ಕೊಳ್ತಾ ಇದ್ದು, ತಾನೂ ಸೌಮ್ಯವಾಗಿ ಬಾಳ್ತಿರೋ ತನ್ನ ಗಂಡ ಶ್ರೀಕಂಠುವಿನ ಸ್ವಾಟೆ ತಿವಿಯುವ ತನ್ನ ಅತೃಪ್ತ ನಡವಳಿಕೆಯನ್ನು ನೆನಸಿಕೊಂಡು ತುಟಿ ಕಚ್ಚಿಕೊಂಡಳು.

'ಶ್... ಬೇಗ,ಬೇಗ, ಹೊತ್ತಾಯ್ತು... ನಿನಗೆ ಯಾವ ನಮೂನೆ ಗಂಡ ಬೇಕೂಂತ ಹೇಳಮ್ಮ ಕಮಲಮ್ಮ.... ಶೀಘ್ರವಾಗಿ ಕರುಣಿಸಿ ನಾನು ಅಂತರ್ಧಾನನಾಗ್ತೀನಿ' ಎಂದು ಬ್ರಹ್ಮ ಅಸಹನೆಯನ್ನು ತೋರಿ ಅವಸರಿಸಿದಾಗ, ಕಮ್ಲೂ ಹಿಂದೆ ಮುಂದೆ ನೋಡದೆ ಚಕ್ಕನೆ–

'ಪ್ಲೀಸ್ ಪ್ರಜಾಪತಿ ಬ್ರಹ್ಮದೇವನೇ, ಏಳೇಳು ಜನ್ಮಕ್ಕೂ ನನಗೆ ಈ ಗಂಡನೇ ಇರಲಪ್ಪ... ಪ್ಲೀಸ್ ಪ್ಲೀಸ್...' ಎಂದು ಅವಳು ಗೋಗರೆಯುವಷ್ಟರಲ್ಲಿ, ಎದುರಿನ ಜಾಗ ಖಾಲಿಯಾಗಿತ್ತು.

ಪ್ರತಿಕ್ರಿಯಿಸಿ: feedback@sudha.co.in